ಅವರಿಗೂ ಕೂಡ ಕೊಡುವಂಥ ಕೆಲಸವನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾಜಿ ಪಟೇಲರು ಒಂದಷ್ಟು ಜನ ಉಳಿದಿದ್ದಾರೆ. ಮಾನ್ಯ ಜೆ.ಹಚ್.ಪಟೇಲರು ಮುಖ್ಯಮಂತ್ರಿಗಳಿದ್ದಾಗ ಇದರ ಬಗ್ಗೆ ವಿಧಾನಸಭೆಯಲ್ಲಿ ಪ್ರಸ್ತಾಪಕ್ಕೆ ಬಂದಿತ್ತು. ಆಗ ಸಭಾಧ್ಯಕ್ಷರಾಗಿದ್ದಂಥ ಮಾನ್ಯ ರಮೇಶ್‌ಕುಮಾರ್ ಅವರು ಒಂದು ಸಲಹೆಯನ್ನು ಕೊಟ್ಟಿದ್ದರು. ಇವರು ಬಹಳ ಜನ ಇಲ್ಲ, ಮಾಜಿ ಪಟೇಲರು ಯಾರ್ಯಾರು ಇದ್ದಾರೆ, ಅವರಿಗೆ ಗೌರವಧನ ಕೊಡಬೇಕು, ಅವರಿಗೆ ಜೀವನ ನಡೆಸಲಿಕ್ಕೆ ಒಂದು ಅವಕಾಶ ಕೊಡಿ ಎಂದು ಸಲಹೆ ಮಾಡಿದರು. ಆದ್ದರಿಂದ, ದಯವಿಟ್ಟು ಇದರ ಬಗ್ಗೆ ಗಮನಹರಿಸಿ. ಇದಕ್ಕೆ ಏನಾದರೂ ಮಾಡಿ ಒಂದು ಮುಕ್ತಾಯ ಹಾಡಿರಿ.

ಶ್ರೀ ಎಸ್.ಎಸ್.ಪಾಟೀಲ್: ಸರ್ಕಾರಕ್ಕೆ ಹೋದರೆ ಏನೂ ಬರುವುದಿಲ್ಲ. ಕೊನೆಗೆ ಯಾವುದಾದರೂ ಒಂದು ಉತ್ತರ ಹೇಳುತ್ತಾರೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಡಿಸ್ಕ್ರಿಮಿನೇಶನ್‌ನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ಮಾಡಲು ಪರಿಶೀಲಿಸುತ್ತೇನೆ. ಅದನ್ನು ಸರಿಮಾಡೋಣ. ಪೋಲೀಸ್ ಪಟೇಲರಿಗೆ ಇದು ಅನ್ವಯವಾಗುವುದಿಲ್ಲವೆಂದು ಹೇಳಿ ರೆಗ್ಯುಲರ್ ಪಟೇಲರಿಗೆ ಮಾತ್ರ ಇದನ್ನು ಮಂಜೂರು ಮಾಡಿದ್ದಾರೆ.

(ಗೊಂದಲ)

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಬಾಕಿ ಇದ್ದರೆ ಅದನ್ನು ಕೊಡುವ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಆಗಬಹುದು.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: ಪೋಲೀಸ್ ಪಟೇಲರಿಗೆ...

ಅಧ್ಯಕ್ಷರು: ಅದು ಅನ್ವಯಿಸುವುದಿಲ್ಲವೆಂದು ಹೇಳಿದ್ದಾರೆ.

ತುಮಕೂರು ಜಿಲ್ಲೆಗ ಡಿ.ಎಲ್.ಡಿ.ಬಿ. ಯೋಜನೆಗೆ ಬಿಡುಗಡೆಯಾದ ಅನುದಾನದ ಮೊತ್ತ.

343(2045)

ಶ್ರೀ ಎಸ್.ಶಿವಣ್ಣ(ತುಮಕೂರು): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಗೆ 1998-99 ಮತ್ತು 199-2000ನೇ ಸಾಲಿನಲ್ಲಿ ಡಿ.ಎಲ್.ಡಿ.ಬಿ. ಯೋಜನೆಗೆ ಬಿಡುಗಡೆಯಾದ ಮೊತ್ತವೆಷ್ಟು (ಇಲಾಖಾವಾರು ಬಿಡುಗಡೆ ಮತ್ತು ಖರ್ಚಿನ ಮಾಹಿತಿ ಒದಗಿಸುವುದು)

ಆ) ತುಮಕೂರು ತಾಲ್ಲೂಕಿನ ಯಾವ ಯಾವ ಪ್ರದೇಶದಲ್ಲಿ ಈ ಯೋಜನೆಗಳನ್ನು ಕೈಗೊಳ್ಳಲಾಗಿದೆ ಖರ್ಚಾದ ಮೊತ್ತವೆಷ್ಟು? (ಕೃಷಿ ಮತ್ತು ತೋಟಗಾರಿಕೆ, ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಬಿಡುಗಡೆ ಮಾಡಿದ ಖರ್ಚಿನ ಮಾಹಿತಿ ಒದಗಿಸುವುದು)

ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು):

ಅ) ತುಮಕೂರು ಜಿಲ್ಲೆಗೆ 1998-99 ಹಾಗೂ 199-2000ನೇ ಸಾಲಿನಲ್ಲಿ ಡಿ.ಎಲ್.ಡಿ.ಬಿ. ಯೋಜನೆಯಡಿ ಘಟಕವಾರು ಬಿಡುಗಡೆ ಮಾಡಿದ ಅನುದಾನ ಹಾಗೂ ವೆಚ್ಚದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ತುಮಕೂರು ತಾಲ್ಲೂಕಿನ ಯಾವ ಯಾವ ಪ್ರದೇಶದಲ್ಲಿ ಈ ಯೋಜನೆಯನ್ನು ಕೈಗೊಳ್ಳಲಾಗಿದೆ ಎಂಬ ವಿವರ ಹಾಗೂ ಇವುಗಳ ವೆಚ್ಚದ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ANNEXURE - I

Statement showing the details of Sector-wise amount released and expenditure incurred under DLDB in Tumkur Dist.

(Rs.in Lakhs)

	1998-99					
	Agriculture		Forest		Horticulture	
	Released	Expenditure	Released	Expenditure	Released	Expenditure
1. D.P.R.P	16.250	16.250	15.580	15.580	3.065	3.065
2. I.WD.P	-	-	12.000	12.000	-	-
3. I.R.W.S.	28.062	28.062	2.330	2.330	0.600	0.600
4. E.A.S	44.550	44.550	33.600	33.600	2.000	2.000
5. S.W.C	-	-	2.400	1.620	0.600	0.600
6. M.W.S.	5.000	5.000	-	-	-	-
Total	93.862	93.862	65.909	65.129	6.265	6.265

(Rs.in Lakhs)

1999-2000

1. Bayalu seeme Dev. Board.	12.920	12.920	-	-	-	-
2. I.R.W.S.	30.750	30.750	10.150	10.127	1.315	1.315
3. S.W.C.	-	-	2.386	2.383	0.200	0.200
4. E.A.S	9.000	9.000	18.750	18.750	-	-
Total	52.670	52.670	31.286	31.260	1.515	15.515

ANNEXURE - II

Statement showing the details of places in Tumkur taluk where this programme is taken up.

	Schemes	Works Executed in the villages
B) Expenditure incurred for Tumkur taluk in various schemes from Agriculture, Forest and Horticulture Sectors.	1) I.R.W.S.	1) Bellavi
		2) Mancha gondanahalli
	2) E.A.S.	Haralur, Gudipalasandra, Jakkenahalli
	3) M.W.S.	1) Kithohalli
		2) Bychapura
	Total	

(Rs. in Lakhs)

Agriculture	Forest	Horticulture	Total
-	0.094	-	0.094
0.213	0.395	0.075	0.683
15.000	6.500	-	21.500
1.884	-	-	1.884
0.616	-	-	0.616
17.713	6.989	0.075	24.777

	1999-2000	
	1) S.W.C.	Tumkur
	2) E.A.S.	Tumkur, Haralur, Gudipalesandra Jakkenahalli, Manchagondana halli, Seethakal
	Total	

DP.AP.: Drought Prone Area Programme

I.W.D.P.: Intergrated Waste Land Development Project

I.R.W.S.: Intergrated Rural Water Supply & Enviornmental Sanitation Project.

E.A.S.: Employment Assurance Scheme.

S.W.C.: State Watershed Development Cell.

M.W.S.: Million Wells Scheme.

-	2.183	-	2.183
1.300	3.000	-	4.300
1.300	5.183	-	6.483

ಶ್ರೀ ಎಸ್.ಶಿವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ದುರಾದೃಷ್ಟವಶಾತ್ ಏನಾಗಿದೆ ಎಂದರೆ ಡಿ.ಎಲ್.ಡಿ.ಬಿ. ವಿಭಾಗ ಏನಿದೆ, ಅದರ ಒಟ್ಟಾರೆ ಕಾಮಗಾರಿಗಳಿಗೆ ಕೊಡತಕ್ಕಂಥ ಹಣಕ್ಕಿಂತ ಸಂಬಳವೇ ಜಾಸ್ತಿಯಾಗಿದೆ. ಅದಕ್ಕೋಸ್ಕರ ನಾನು ಮಾನ್ಯ ಕೃಷಿಮಂತ್ರಿಗಳಿಗೆ ಕೇಳುವುದೇನೆಂದರೆ, ಸಂಬಳಕ್ಕಿಂತ ಅನುದಾನವನ್ನು ಜಾಸ್ತಿ ಬಿಡುಗಡೆ ಮಾಡುತ್ತೀರಾ? ಇಲ್ಲವೇ, ಸಂಬಳ ಕೊಟ್ಟು ಪುಕ್ಕಸಟ್ಟೆ ಅವರನ್ನು ಅಲ್ಲಿ ಕೂಡಿಸುತ್ತೀರಾ? ಸರ್ಕಾರ ಏನಾದರೂ ಮಾಡಿ ತಾರತಮ್ಯ ಇಲ್ಲದ ಹಾಗೆ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುತ್ತೇವೆ ಎಂದು ನಿರ್ದಿಷ್ಟವಾಗಿ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಈಗ ಮಾನ್ಯ ಸದಸ್ಯರು ಆತಂಕವನ್ನು ವ್ಯಕ್ತಪಡಿಸಿದ್ದು ಸತ್ಯ. ಈಗಾಗಲೇ 1998-99ನೇ ಸಾಲಿನ ಮಾಪಿತಿಯನ್ನು ಒದಗಿಸಿರುವುದಕ್ಕೂ, 1999-2000 ವರ್ಷಕ್ಕೂ ಬಿಡುಗಡೆ ಆಗಿರತಕ್ಕಂಥ ಹಣದಲ್ಲಿ ಕಡಿಮೆಯಾಗಿದೆ. ಇದಕ್ಕೆ ಮುಖ್ಯವಾದಂಥ ಕಾರಣ ಏನೆಂದರೆ, ಈ ಯೋಜನೆಗಳು, ನಿಮ್ಮ ತಾಲ್ಲೂಕಿನಲ್ಲಿ ನಡೆಯತಕ್ಕಂಥ ಯೋಜನೆಗಳು ಡಿ.ಪಿ.ಎ.ಪಿ., ಐ.ಡಬ್ಲ್ಯೂ.ಡಿ.ಪಿ., ಐ.ಆರ್.ಡಬ್ಲ್ಯೂ.ಎಸ್, ಇ.ಎ.ಎಸ್., ಎಂ.ಡಬ್ಲ್ಯೂ.ಎಸ್. ಇದೆಲ್ಲ ಬಹುತೇಕ ಯೋಜನೆಗಳು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರತಕ್ಕಂಥ ಯೋಜನೆಗಳು. ಕೇಂದ್ರ ಸರ್ಕಾರದಿಂದ ಬರತಕ್ಕ ಹಣದಲ್ಲಿ ಕಡಿತ ಉಂಟಾಗಿ ಈ ರೀತಿಯಾದಂಥ ತೊಂದರೆಯಾಗಿದೆ. ಅವರು ಹೇಳತಕ್ಕದ್ದು ಎಸ್ಟಾಬ್ಲಿಶ್‌ಮೆಂಟ್ ಎಷ್ಟು ಇದೆಯೋ ಅಷ್ಟನ್ನೂ ಕೂಡ ನಾವು ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ ಎಂದು. ಆದರೆ, ತಾವು ಸಲಹೆ ಕೊಟ್ಟಿರುವ ರೀತಿಯಲ್ಲಿ ಇನ್ನು ಮುಂದೆ ಈಗಾಗಲೇ ವಾಟರ್‌ಶೆಡ್ ಡೈರೆಕ್ಟೊರೇಟ್ ಹೊಸದಾಗಿ ಆಗಿರುವುದರಿಂದ ಸಮರ್ಪಕವಾದ ಮತ್ತು ಗುಣಾತ್ಮಕವಾದಂಥ ಕೆಲಸ ಆಗುವುದರ ಬಗ್ಗೆ ಸರ್ಕಾರ ಖಂಡಿತವಾಗಿ ಚಿಂತನೆ ಮಾಡುತ್ತದೆ ಎಂದು ಹೇಳುತ್ತೇನೆ.

ಅಧ್ಯಕ್ಷರು: ಅಶೋಕ್ ಅವರ ಪ್ರಶ್ನೆ 2015ಕ್ಕೆ 'ಕಂದಾಯ ಸಚಿವರು' ಅಂತ ಹಾಕಿದ್ದಾರೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಈ ಪ್ರಶ್ನೆಯನ್ನು ನಗರಾಭಿವೃದ್ಧಿ ಸಚಿವರಿಗೆ ವರ್ಗಾಯಿಸಲಾಗಿದೆ.

ಅಧ್ಯಕ್ಷರು: ಹೌದು. ನಗರಾಭಿವೃದ್ಧಿ ಸಚಿವರು ಬಂದಿಲ್ಲ. ಅವರು ಬಂದ ನಂತರ ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳೋಣ.

ಶ್ರೀ ಆರ್.ಅಶೋಕ್: ಪೌರಾಡಳಿತ ರಾಜ್ಯಸಚಿವರು ಸದನದಲ್ಲಿ ಇದ್ದಾರೆ.

ಅಧ್ಯಕ್ಷರು: ತಾವು ಹೇಳಿ.....

(ಗೊಂದಲ)

ಶ್ರೀ ಆರ್.ಅಶೋಕ್: ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಎಂದು ಸೈನ್ ಮಾಡಿರುವ ಉತ್ತರ ಬಂದಿದೆ.

ಅಧ್ಯಕ್ಷರು: ಇದರಲ್ಲಿ ಸ್ವಲ್ಪ ಕನ್‌ಫ್ಯೂಶನ್ ಇದೆ. ಇದನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಆರ್.ಅಶೋಕ್: ನಗರಾಭಿವೃದ್ಧಿ ಇಲಾಖೆಯವರು ಸಹಿ ಮಾಡಿದ ಉತ್ತರ ಕಳಿಸಿದ್ದಾರೆ. ಆ ಇಲಾಖೆಯವರೇ ಸಹಿ ಮಾಡಿ ಕೊಟ್ಟಿರುವುದು. ಇದರಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ ಎಂದು ಇದೆ.

ಅಧ್ಯಕ್ಷರು: ಈಗ ಒಟ್ಟಿನಲ್ಲಿ ಕನ್‌ಫ್ಯೂಶನ್ ಉಂಟಾಗಿದೆ. ಒಂದು ವಾರ ಕಾಯಿರಿ. ಮುಂದಿನ ಶುಕ್ರವಾರ ಇದನ್ನು ತೆಗೆದುಕೊಳ್ಳೋಣ.

ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ತಾಲ್ಲೂಕಿನ ಬೊಕ್ಕಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ.

245(1662)

ಶ್ರೀ ಜಿ.ರಾಜು ಗೌಡ(ಹನ್ನೂರು):ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನ ಬೊಕ್ಕಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ದುರುಪಯೋಗವಾದ ಹಣ ಎಷ್ಟು?

ಆ) ದುರುಪಯೋಗ ಮಾಡಿದವರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಡಿ.ಕೆ.ಶಿವಕುಮಾರ (ಸಹಕಾರ ಸಚಿವರು):

ಅ) ಮೈಸೂರು-ಚಾಮರಾಜನಗರ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧಿಕಾರಿಗಳ ತಪಾಸಣೆ ವರದಿಯ ಪ್ರಕಾರ ಸಂಘದಲ್ಲಿ ರೂ. 1,05,783-79 ಅವ್ಯವಹಾರವಾಗಿರುವುದು ಕಂಡು ಬಂದಿರುತ್ತದೆ.

ಆ) ತಪಾಸಣೆ ವರದಿಯಲ್ಲಿ ಅವ್ಯವಹಾರ ನಡೆದಿರುವುದಾಗಿ ತಿಳಿದು